ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು)

1995ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ (ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ)ವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾಪ ಮಂಡಿಸಲಾಯಿತು)

ಶ್ರೀ ಎಂ.ಪಿ.ಪ್ರಕಾಶ್ : ಈ ವಿಧೇಯಕಕ್ಕೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ಸೂಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ.ರಾಮಕೃಷ್ಣ(ಆನೇಕಲ್) : ಈ ವಿಧೇಯಕದಲ್ಲಿ ಅನೇಕ ಲೋಪದೋಷಗಳು ಇದೆ ಎನ್ನುವಂಥದ್ದನ್ನು ಹಿಂದೆ ನಾವು ಎತ್ತಿ ತೋರಿಸಿದ್ದೇವೆ. ಅದಕ್ಕೆ ತಮ್ಮಿಂದ ಸಮರ್ಪಕವಾದ ಉತ್ತರ ಬರಲಿಲ್ಲ. ಇದನ್ನು ಮೇಲ್ಮನೆಗೆ ತೆಗೆದುಕೊಂಡು ಹೋಗಿ ಅಲ್ಲಿ ಮಂಡಿಸಿದಾಗ ಅವರಿಗೂ ತಾವು ಸಮಾಧಾನಕರವಾದ ಉತ್ತರವನ್ನು ಕೊಡದೇ ಪುನಃ ಈ ಮಸೂದೆಯನ್ನು ತಾವು ಈ ಮನೆಯಲ್ಲಿ ತಂದಿದ್ದೀರಿ. ಈಗಲೂ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ತಿದ್ದುಪಡಿಗಳು ಕೇವಲ ಎರಡು ಇವೆ. ಈ ಎರಡಕ್ಕೆ ತಾವು ಒಪ್ಪಿಗೆ ಕೊಡುವುದಾದರೆ ಈ ವಿಧೇಯಕ ಸರ್ವಾನುಮತದಿಂದ ಪಾಸಾಗುತ್ತದೆ. ಇದರ ಉದ್ದೇಶ ಚೆನ್ನಾಗಿ ಇದೆ ಏನು ಹೇಳಿದ್ದೀರಿ ಯಾರು ಪಕ್ಷಾಂತರ ಮಾಡಬಾರದು ಎಂದು ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಮೂರನೇ ಒಂದು ಭಾಗ ಸದಸ್ಯರು ಮಾತ್ರ ಪಕ್ಷಾಂತರ ಮಾಡಿದರೆ ಪಕ್ಷಾಂತರ ಕಾನೂನು ಅನ್ವಯಿಸುವುದಿಲ್ಲ. ಆದರೆ ಒಬ್ಬರು ಮಾಡಿದರೆ ಅನ್ವಯಿಸುತ್ತದೆ. ಇದು ಯಾವ ನೀತಿ? ಪಕ್ಷಾಂತರ ನಿಲ್ಲಿಸಬೇಕು ಎನ್ನುವುದ ನಿಜ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಒಂದು ಪಕ್ಷದಲ್ಲಿ ಮೂರು ಜನ ಇದ್ದರೆ ಅದರಲ್ಲಿ ಇಬ್ಬರು ಜನ ಪಕ್ಷಾಂತರ ಮಾಡಿದರೆ ಅದು ಪಕ್ಷಾಂತರ ಆಗುವುದಿಲ್ಲ. ಆದರೆ ಒಬ್ಬ ಹೋದರೆ ಮಾತ್ರ ಪಕ್ಷಾಂತರ ಆಗುತ್ತದೆ. ಇದರಿಂದ ನಿಮ್ಮ ಸ್ಪಿರಿಟ್‌ಗೆ ನೀವು ವಿರೋಧ ಮಾಡಿದಹಾಗೆ ಆಗುತ್ತದೆ. ಇದು ಒಂದು ಸಣ್ಣ ತಿದ್ದುಪಡಿ. ಈ ಒಂದು ತಿದ್ದುಪಡಿಯನ್ನು ಒಪ್ಪಿಕೊಂಡರೆ ನಾವು ಸರ್ವಾನುಮತದಿಂದ ಇದಕ್ಕೆ ಒಪ್ಪಿಗೆಯನ್ನು ಕೊಡುತ್ತೇವೆ.

ಇನ್ನು ಎರಡನೇಯದಾಗಿ ತಿದ್ದುಪಡಿ ಏನೆಂದರೆ ಅನರ್ಹತೆ ತೀರ್ಮಾನ ಮಾಡತಕ್ಕವರು ಯಾರು? ಸರ್ಕಾರದ ಅಧಿಕಾರಿಗಳು, ಕಾರ್ಯದರ್ಶಿಗಳು, ಮುಖ್ಯಕಾರ್ಯದರ್ಶಿಗಳು ಮತ್ತೊಬ್ಬರನ್ನು ನೇಮಕ ಮಾಡುತ್ತೀರಿ, ಸದಸ್ಯರ ಅನರ್ಹತೆ ಮಾಡತಕ್ಕ ಅಧಿಕಾರವನ್ನು ಯಾರಿಗೆ ಕೊಟ್ಟಿದ್ದೀರಿ ಎಂಬುದು ಮುಖ್ಯ. ರಾಜಕೀಯ ಪಕ್ಷಗಳು ಇರುವಾಗ ಅಧಿಕಾರಿಗಳ ಕೈವಾಡ ಇದ್ದೇ ಇರುತ್ತದೆ. ಅವರು ಬೇಕಾದವರನ್ನು ಅನರ್ಹರನ್ನಾಗಿ ಮಾಡಬಹುದು. ನಿಮ್ಮ ಉದ್ದೇಶ ನೆರವೇರಬೇಕಾದರೆ ಈ ಕಾನೂನನ್ನು

ಎಲೆಕ್ಷನ್ ಕಮೀಷನ್‌ಗೆ ಕೊಡಿ. ಈ ಎರಡು ತಿದ್ದುಪಡಿಗಳನ್ನು ತಾವು ಒಪ್ಪುವುದಾದರೆ ನಾವು ಅದಕ್ಕೆ ಸರ್ವಾನುಮತದಿಂದ ಬೆಂಬಲವನ್ನು ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಾವು ಹೇಳಿದ್ದಂಥ ಸಲಹೆಯನ್ನು ಒಪ್ಪಿದ್ದರು. ಈ ಲೋಕಲ್ ಅಥಾರಿಟೀಸ್‌ನಲ್ಲಿ ಇದು ಆಂಟೀ ಡಿಫೆಕ್ಷನ್ ಕಾನೂನಿನಲ್ಲಿ ವಿಶೇಷವಾಗಿ ಜಿಲ್ಲಾ ಪರಿಷತ್ ಅಪೀಲ್ ಏನಿದೆ ಈ ಡಿಸ್‌ಕ್ವಾಲಿಫಿಕೇಶನ್‌ದ್ದು ಈ ಆಫೀಲ್‌ನ್ನು ಹಾಕತಕ್ಕಂಥದ್ದು ಸೆಕ್ಷನ್ 4ರ ಪ್ರಕಾರ ತಾವು ಏನು ತಿದ್ದುಪಡಿ ತಂದಿದ್ದೀರಿ ಇದರಲ್ಲಿ

"In case of Zillapanchayat, the secretary to Government RDPR Department...."

ಅಧ್ಯಕ್ಷರೇ ಹಿಂದೆ ಈ ಎಲೆಕ್ಷನ್ ಕಮೀಷನ್ ಸ್ವತಂತ್ರವಾಗಿರಲಿಲ್ಲ. ಈಗ ಸ್ವತಂತ್ರವಾಗಿ ಎಲೆಕ್ಷನ್ ಕಮಿಷನರ್ ಇರುವಾಗ ಈ ಅಪೀಲನ್ನು ನಾವು ಸೆಕ್ರೆಟರಿ ಮುಂದೆ ಹೋಗತಕ್ಕಂಥದ್ದು ಅಷ್ಟು ಸರಿಯಿಲ್ಲ. ಏಕೆಂದರೆ ಇದರಲ್ಲಿ ನೇರವಾಗಿ ಸರ್ಕಾರದವರು ಇಂಟರ್‌ಫಿಯರ್ ಮಾಡತಕ್ಕಂಥ ಒಂದು ಸಾಧ್ಯತೆ ಇರುತ್ತದೆ. ಮಾಡಿಯೇ ಮಾಡುತ್ತಾರೆ ಎಂದು ನಾನು ಹೇಳುತ್ತಿಲ್ಲ. ಕೆಲವು ಸಂದರ್ಭಗಳಲ್ಲಿ ನಿಮಗೆ ಬೇಕಾದಂಥ ಸೆಕ್ರೆಟರಿಗಳನ್ನು ಹಾಕಿಕೊಂಡು ಯಾವುದೋ ಬೇಡವಾದಂಥ ಸದಸ್ಯರಿಗೆ ಡಿಸ್‌ಕ್ವಾಲಿಫೈ ಮಾಡಬೇಕು ಎಂದು ಇದ್ದರೆ ಖಂಡಿತವಾಗಿ ಆ ಸೆಕ್ರೆಟರಿಗೆ ಹೇಳಿದರೆ ಇದು ಆಗಬಹುದು. ಇದಕ್ಕಾಗಿ ಇದನ್ನು ಈ ಆಡಳಿತದಿಂದ ತೆಗೆದು ತಾವು ನಿಷ್ಪಕ್ಷಪಾತವಾಗಿ ಒಂದು ಚುನಾವಣೆ ನೋಡಿಕೊಂಡು ಹೋಗತಕ್ಕಂಥ ಎಲೆಕ್ಷನ್ ಕಮಿಷ್‌ನರ್ ಏನು ಇದ್ದಾರೆ ಅವರಿಗೆ ಇದನ್ನು ವಹಿಸಿಕೊಡಿ, ಅವರು ಸ್ವತಂತ್ರರಾಗಿದ್ದಾರೆ. ಅವರ ಮುಂದೆ ಅಪೀಲ್ ಹಾಕಿದರೆ ನ್ಯಾಚುರಲ್‌ಲೀ ಅವರು ನೋಡಿಕೊಂಡು ಪರಿಶೀಲನೆ ಮಾಡಿಕೊಂಡು ಅವರು ನ್ಯಾಯವನ್ನು ಕೊಡುವುದಕ್ಕೆ ಆಗುತ್ತದೆ. ಏಕೆಂದರೆ ಅವರಿಗೆ ಚುನಾವಣೆ ಆದಮೇಲೆ ಎಲೆಕ್ಷನ್ ಯಾವುದೂ ಇರುವುದಿಲ್ಲ. ಚುನಾವಣೆಯಾದ ಮೇಲೆ ಬಹುಶಃ ಅವರು ಐದು ವರ್ಷಗಳು ಆರಾಮವಾಗಿ ಕುಳಿತಿರುತ್ತಾರೆ. ಅದಕ್ಕಾಗಿ ದಯವಿಟ್ಟು ಈ ಅಪೀಲ್ ಪ್ರಾವಿಷನ್‌ನ್ನು ಅವರಿಗೆ ಕೊಟ್ಟರೆ ಸರಿಯಾಗುತ್ತದೆ ಮತ್ತು ಇದಕ್ಕೆ ತಿದ್ದುಪಡಿಯನ್ನು ತಂದರೆ ಸರಿಯಾಗುತ್ತದೆ ಎಂಬ ವಿಚಾರವನ್ನು ನೀವೂ ಸಹ ಒಪ್ಪಿಕೊಂಡಿದ್ದಿರಿ. ಹೀಗಿದ್ದರೂ ಕೂಡ ಇದರ ಬಗ್ಗೆ ನೀವು ಅಮೆಂಡ್‌ಮೆಂಟ್ ತಂದಿಲ್ಲ. ಬಹುಶಃ ತಾವು ಅಫಿಶಿಯಲ್ ಅಮೆಂಡ್‌ಮೆಂಟ್ ತಂದಿದ್ದರೆ ಈ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಅದಕ್ಕೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ಅಟ್ಲೀಸ್ಟ್ ಈಗಲಾದರೂ ಒಂದು ಅಫಿಶಿಯಲ್ ಅಮೆಂಡ್‌ಮೆಂಟ್ ತಂದು ಇದನ್ನು ತಾವು ಅವರಿಗೆ ಒಪ್ಪಿಸಬೇಕು. ಇಲ್ಲದಿದ್ದರೆ ಪುನಃ ನಾವು ಅಧಿಕಾರಿಗಳ ಕೈಯಲ್ಲಿ ಈ ಚುನಾಯಿತ ಸದಸ್ಯರನ್ನು ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ದುರುಪಯೋಗಪಡಿಸಿಕ್ಕೊಳ್ಳುವ ಸಾಧ್ಯತೆ ಕೂಡಾ ಇದೆ. ದಯವಿಟ್ಟು ಇದರ ಬಗ್ಗೆ ತಾವು ಸ್ಪಷ್ಟವಾದ ಅಭಿಪ್ರಾಯವನ್ನು ಕೊಡಬೇಕು.

ಶ್ರೀ ಎಂ.ಪಿ.ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಮಾನ್ಯ ಇಬ್ಬರು ಹಿರಿಯ ಸದಸ್ಯರು ಸೂಚಿಸಿರತಕ್ಕಂಥ ಮಾತುಗಳು ಕೂಡ ಸ್ವಾಗತಾರ್ಹಗಿದೆ. ನಾನು ಪ್ರಾಯಶಃ ತಮ್ಮ ಕಛೇರಿಯಲ್ಲಿ ನಡೆದ ಮಾತುಕತೆಯ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಯಾರಾದರೂ ತಿದ್ದುಪಡಿಯನ್ನು ತರಬಹುದು ಎಂಬುದನ್ನು ಭಾವಿಸಿದ್ದೆ. ಈಗಲಾದರೂ ಕೂಡ ನಾನು ಸರ್ಕಾರದಲ್ಲಿ ಇದನ್ನು ತರಬಹುದು. ಅದರ ಬದಲು ಮೇಲ್ಮನೆಯಲ್ಲಿ ನಮ್ಮ ಕಾನೂನು ಸಂಸದೀಯ ಸಚಿವರು ಈ ವಿಚಾರದಲ್ಲಿ ಭಾಷಣ ಕೊಟ್ಟಿದ್ದಾರೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಆದುದರಿಂದ ನನ್ನನ್ನು ನಂಬಿ. ಈ ಸದನದಲ್ಲಿ ಕೊಟ್ಟಿರತಕ್ಕಂಥ ಭರವಸೆ ಏನಿದೆ ಈಗ ತಾವು ಇದನ್ನು ಪರ್ಯಾಲೋಚಿಸಿ ಒಪ್ಪಿಗೆ ಕೊಟ್ಟ ನಂತರ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿಯನ್ನು ತಂದು ಚುನಾವಣಾ ಆಯುಕ್ತರಿಗೆ ಅರ್ಹತೆ ಅಥವಾ ಅನರ್ಹತೆ ಮಾಡತಕ್ಕ ವಿಚಾರದಲ್ಲಿ ಅವರಿಗೆ ಅಧಿಕಾರವನ್ನು ಕೊಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ನಾವೇ ತಂದಿದ್ದರೆ ಒಪ್ಪಿಕೊಳ್ಳುತ್ತಿದ್ದೆವು ಎಂದು ಹೇಳುತ್ತಾರೆ, ಈಗ ಇವರೇ ತಂದುಬಿಡಲಿ ನಾವು ಒಪ್ಪಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಸದನದಲ್ಲಿ ಕೊಟ್ಟಂಥ ಭರವಸೆ ಮಾತನ್ನು ನೀವು ಅಪನಂಬಿಕೆ ಪಡಬೇಕಾದಂಥ ಅಗತ್ಯವಿಲ್ಲ. ನಾವು ನಾಳೆ ಮತ್ತೆ ಮೇಲ್ಮನೆಗೆ ಹೋಗಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಾನು ನಿಮ್ಮ ಮಾತನ್ನು ಒಪ್ಪಿಕೊಳ್ಳುತ್ತೇನೆ. ನೀವು ಇಲ್ಲಿ ಕೊಟ್ಟಂಥ ಆಶ್ವಾಸನೆ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಇದೇ ಮಾತನ್ನು ತಾವು ಮೇಲ್ಮನೆಯಲ್ಲಿ ಸ್ಪಷ್ಟವಾಗಿ ಹೇಳಲಿಲ್ಲ. ಅದಕ್ಕೆ ಅಲ್ಲಿ ರಿಜೆಕ್ಟ್ ಆಯಿತು. ಒಂದು ವೇಳೆ ಇದಕ್ಕೆ ಅಮೆಂಡ್‌ಮೆಂಟ್ ತರುತ್ತೇವೆ, ಅರ್ಡಿನೆನ್ಸ್ ತರುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ನೀವು ಸ್ಪಷ್ಟವಾಗಿ ಅಲ್ಲಿ ಕೊಟ್ಟಿದ್ದರೆ ಬಹುಶಃ ಇದು ಅಲ್ಲಿ ರಿಜೆಕ್ಟ್ ಆಗಿ ಬರುತ್ತಿರಲಿಲ್ಲ. ಇಲ್ಲಿಗೆ ಅಲ್ಲಿಂದ ರಿಜೆಕ್ಟ್ ಆಗಿ ಬಂದಮೇಲೆ ಈಗ ಸ್ಪಷ್ಟವಾಗಿ ಆಶ್ವಾಸನೆ ಕೊಟ್ಟಿದ್ದೀರಾ. ಈ ವಿಚಾರ ತಮಗೂ ಗೊತ್ತಿದೆ. ಇದರರ್ಥ ಏನು ಎಂದರೆ ಆಗ ನೀವು ಮುಖ್ಯಮಂತ್ರಿಗಳನ್ನು ಇನ್ನೂ ಕನ್ವಿನ್ಸ್ ಮಾಡಿರಲಿಲ್ಲ. ಆದುದರಿಂದ ಈಗ ನೀವು ಕೊಟ್ಟಿರುವ ಆಶ್ವಾಸನೆಯನ್ನು ನಂಬಿದ್ದೇವೆ ಮತ್ತು ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಒಂದು ಮಾತು, ಇದನ್ನು ತಕ್ಷಣ ತರಬೇಕು. ಏಕೆಂದರೆ within seven days ಎಂದು ಇದ್ದದ್ದು ಈಗ ನೀವು within 30 days ಎಂದು ಮಾಡಿದ್ದೀರಿ. ಈ ಮೂವತ್ತು ದಿನದ ಅವಧಿಯಲ್ಲಿ ಯಾರಾದರೂ ಹೋಗುವವರಿದ್ದರೆ ಅವರಿಗೆ ಅನುಕೂಲ ಆಗಬೇಕು. ಇಲ್ಲದೇ ಇದ್ದರೆ

ಪುನಃ ಅವರು ಸೆಕ್ರಟರಿ ಹತ್ತಿರವೇ ಬರಬೇಕಾಗುತ್ತದೆ. ಅದಕ್ಕೆ ತಕ್ಷಣ ಇದನ್ನು ತರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈಗ ಅವರು ಹೇಳಿದಂಥದ್ದು, ನಾವು ಈಗ ಕೊಟ್ಟಿರುವ ಭರವಸೆಯನ್ನು ನೇರವಾಗಿ ಇಲ್ಲಿ ಹೇಳಿದ ರೀತಿಯಲ್ಲಿ ಮೇಲ್ಮನೆಯಲ್ಲಿ ಹೇಳಲಿಲ್ಲವೆಂದು. ಈಗ ಅವರಿಗೆ ಗೊತ್ತಿರುವಂತೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚಿಸಬೇಕಾಗಿತ್ತು, ನಮ್ಮ ಸಹೋದ್ಯೋಗಿಗಳ ಜೊತೆ ಸಮಾಲೋಚಿಸಬೇಕಾಗಿತ್ತು . ಸಭಾನಾಯಕರು ಮತ್ತು ನಾವು ಇಬ್ಬರೂ ಕೂಡ ಈ ವಿಚಾರದಲ್ಲಿ ಹೇಳಿದೆವು. ಅಲ್ಲಿ ನೇರವಾಗಿ ಸುಗ್ರೀವಾಜ್ಞೆ ತರುತ್ತೇವೆ, ತಿದ್ದುಪಡಿ ತರುತ್ತೇವೆ ಎನ್ನತಕ್ಕ ಮಾತನ್ನು ಹೇಳಲಿಲ್ಲ. ಆದರೆ ಆ ಇಂಗಿತವನ್ನು ಕೊಟ್ಟಿದ್ದೆವು. ಅದೇನೇ ಇರಲಿ ಖಂಡಿತವಾಗಿ ಇಲ್ಲಿ ಕೊಟ್ಟಂಥ ಭರವಸೆಯನ್ನು ನೇರವೇರಿಸುತ್ತೇವೆ. ಅಲ್ಲಿ ರಾಜಕೀಯ ಪಕ್ಷಗಳಿಗೆ 15 ದಿವಸ ಕಾಲಾವಕಾಶ ಇದೆ. ಆಯಾಯ ರಾಜಕೀಯ ಪಕ್ಷ ಆತನನ್ನು ಕ್ಷಮಿಸಬಹುದು ಅಥವಾ ಮತ್ತೇನನ್ನಾದರೂ ಮಾಡಲಿಕ್ಕೆ 15 ದಿವಸ ಅವಧಿ ಇರುವುದರಿಂದ ಏಳು ದಿವಸದ ಅವಧಿಯ ಬದಲು 30 ದಿವಸದ ಅವಧಿ ಎಂದು ಹೇಳಿ ನಾವು ಕಾಣಿಸಿದ್ದೇವೆ. ಆದುದರಿಂದ ಸಭೆ ಇದಕ್ಕೆ ಅಂಗೀಕಾರ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇವೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

''ವಿಧಾನಪರಿಷತ್ತಿನಿಂದ ತಿರಸ್ಕೃತವಾಗಿರುವ 1995ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 6ರವರೆಗೆ

ಅಧ್ಯಕ್ಷರು : ''ಖಂಡ 2ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಧ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ.ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವ 1995ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

''ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡಿರುವ 1995ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 1995

* ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು) : ವಿಧೇಯಕ ಏನೆಂದರೆ....

ಶ್ರೀ ವೈ.ರಾಮಕೃಷ್ಣ : ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸಂಪೂರ್ಣವಾಗಿ ಮತ್ತು ಸಮಗ್ರವಾಗಿ ಪರಿಶೀಲನೆ ಮಾಡಿ ತಿದ್ದುಪಡಿ ತರುತ್ತೇವೆಂದು ಹೇಳಿದ್ದರು. ಆದರೆ ಈಗ ಆ ರೀತಿ ಆಗಿಲ್ಲ.

ಶ್ರೀ ಎಂ.ಸಿ.ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಈಗ ತಂದಿರತಕ್ಕಂಥ ತಿದ್ದುಪಡಿ ಏನೆಂದರೆ ಇವೊತ್ತು ಕಾನೂನಿನಲ್ಲಿ ಸೆಕ್ರೆಟರಿ ಎನ್ನುವ ಡಿಫಿನೇಷನ್ ಇದೆ, ಆ ಡೆಫಿನೇಷನ್‌ನಲ್ಲಿ ಚೀಫ್ ಸೆಕ್ರೆಟರಿ ಎನ್ನುವ ಪದವಿಲ್ಲ. ಲೋಕಾಯುಕ್ತ ಕಾನೂನಿನಲ್ಲಿ ಮುಖ್ಯ ಕಾರ್ಯದರ್ಶಿಯವರು ಒಳಪಡುವುದಿಲ್ಲ. ಇದನ್ನು ನಾವು ನೋಡಿಯಾದ ಮೇಲೆ ಇದಕ್ಕೆ ಒಂದು ತಿದ್ದುಪಡಿಯನ್ನು ತರಬೇಕು ಎಂದು ತೀರ್ಮಾನ ಮಾಡಿ ತಿದ್ದುಪಡಿಯನ್ನು ತಂದಿದ್ದೇವೆ. ಇನ್ನೊಂದು ತಾವು ಏನು ತಿದ್ದುಪಡಿ ತರಬೇಕೆಂದು ಸಮಗ್ರವಾಗಿ ಸಲಹೆಗಳನ್ನು ನೀಡಿದ್ದೀರಿ. ಅದನ್ನು ನಾವು ಸ್ವೀಕಾರ ಮಾಡುತ್ತೇವೆ. ಇದರಲ್ಲಿ ಏನಿದೆಯೆಂದರೆ ಉಪ ಲೋಕಾಯುಕ್ತ ಇಲಾಖೆಯಲ್ಲಿ ಉಪಲೋಕಾಯುಕ್ತರಿಗೆ ಅವರ ಪರಿಮಿತಿಯಲ್ಲಿ ಬರತಕ್ಕಂಥವರಿಗೆ ಅಧಿಕಾರಿಗಳ ವಿರುದ್ಧ ಸುಮೋಟೋ ಆಗಿ ವಿಚಾರಣೆ ಮಾಡತಕ್ಕಂಥ ಅಧಿಕಾರ ಅವರಿಗೆ ಇದೆ. ಆದರೆ ಲೋಕಾಯುಕ್ತದ ಯಾವ ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯದರ್ಶಿಯವರಿಗೆ ಸುಮೋಟೋ ಆಗಿ ಅವರಿಗೆ ವಿಚಾರಣೆ ಮಾಡತಕ್ಕಂಥ ಅಧಿಕಾರ ಇಲ್ಲ. ಉಪಲೋಕಾಯುಕ್ತರಿಗೆ ಅವರ ಹಂತದಲ್ಲಿರತಕ್ಕಂತಹ ಅಧಿಕಾರಿಗಳಿದ್ದರೆ, ಲೋಕಾಯುಕ್ತರಿಗೆ ಈ ಹಂತದಲ್ಲಿರತಕ್ಕಂತಹ ಅಧಿಕಾರಗಳಿಲ್ಲ. ಆದುದರಿಂದ ಮುಖ್ಯ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಇತರೆ ಅಧಿಕಾರಿಗಳು

ಲೋಕಾಯುಕ್ತದ ಪರಿಮಿತಿಯೊಳಗೆ ಯಾರು ಬರುತ್ತಾರೆ, ಅವರಿಗೆ ಲೋಕಾಯುಕ್ತರು ಸುಮೋಟೊವಾಗಿ ಅವರ ಮೇಲೆ ವಿಚಾರಣೆ ಮಾಡಲಿಕ್ಕೆ ಅಧಿಕಾರವನ್ನು ಕೊಡಿ ಎಂದು ಕೇಳಿರತಕ್ಕಂತಹದ್ದು ಈ ಒಂದು ತಿದ್ದುಪಡಿ. ಮತ್ತೆ ಮಾನ್ಯ ಸಭಾಧ್ಯಕ್ಷರೆ, ನಾವು ಇದರ ಬಗ್ಗೆ ಸಮಗ್ರವಾಗಿರತಕ್ಕ ಒಂದು ತಿದ್ದುಪಡಿಯನ್ನು ತರಬೇಕು ಮತ್ತು ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಬಹಳ ಜನ ಲೋಕಾಯುಕ್ತವನ್ನು ಹಂತವಿಲ್ಲದ್ದು ಎಂದು ಹೇಳುತ್ತಾರೆ. ಹಾಗೂ ಇದು ಕೇವಲ ಸಲಹೆ ನೀಡುವ ಅಧಿಕಾರವನ್ನು ಹೊಂದಿದೆ ಎಂದೂ ಕೂಡ ಹೇಳುತ್ತಾರೆ. ನಾವು ಇದರ ಬಗ್ಗೆ ಕೂಡ ವಿಚಾರ ಮಾಡಿದ್ದೇವೆ. ವಿಚಾರ ಮಾಡಿ, ಇದಕ್ಕೆ ಸಂಬಂಧಪಟ್ಟ ಹಾಗೆ ಸಮಗ್ರವಾದಂತಹ ಒಂದು ತಿದ್ದುಪಡಿಯನ್ನು ತರಬೇಕೆಂದು ನಾನು ಕೂಡ ಲೋಕಾಯುಕ್ತರವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ ಮತ್ತು ಉಪ ಲೋಕಾಯುಕ್ತರವರ ಜೊತೆಯಲ್ಲಿ ಚರ್ಚೆ ಮಾಡಬೇಕೆನ್ನತಕ್ಕಂತಹದ್ದು ಇದೆ. ನಿಮ್ಮ ಜೊತೆಯಲ್ಲಿ ಕೂಡ ಚರ್ಚೆ ಮಾಡಬೇಕು, ಈ ಸಂದರ್ಭದಲ್ಲಿ ಕೆಲವು ಜನ ಸದಸ್ಯರುಗಳು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಒಂದು ಸಲಹೆಯನ್ನು ಕೂಡ ಕೊಟ್ಟಿದ್ದಾರೆ. ಸಮಗ್ರವಾಗಿರುವಂಥ ತಿದ್ದುಪಡಿಯನ್ನು ತರುತ್ತಿರತಕ್ಕಂತಹ ಸಂದರ್ಭದಲ್ಲಿ ಇದನ್ನು ಜಂಟಿ ಸದನದ ಸಮಿತಿಗೆ ಏತಕ್ಕೆ ಒಪ್ಪಿಸಬಾರದು ಎನ್ನತಕ್ಕ ಸಲಹೆ ಕೂಡ ಕೆಲವು ಸದಸ್ಯರುಗಳಿಂದ ಬಂದಿದೆ. ಆದುದರಿಂದ ನಾನು ಹೇಳುತ್ತಿದ್ದೇನೆ, ಇದಕ್ಕೆ ತಾವು ತಮ್ಮ ಅಂಗೀಕಾರವನ್ನು ಕೊಡಿ ಮತ್ತು ಸಮಗ್ರವಾಗಿರತಕ್ಕಂತಹ ತಿದ್ದುಪಡಿಯನ್ನು ನಾವು ತರಬೇಕೆಂದು ಹೇಳುತ್ತಿರುವ ಸಂದರ್ಭದಲ್ಲಿ ಮತ್ತು ಶಾಸಕರುಗಳು, ಅವರ ಕರ್ತವ್ಯವೇನು? ಇವತ್ತು ಏನಾಗಿದೆ ಎಂದರೆ, ಶಾಸಕರುಗಳು ರಿರ್ಟನ್ಸ್ಸ್ ಅನ್ನು ಲೋಕಾಯುಕ್ತಕ್ಕೆ ಫೈಲ್ ಮಾಡಬೇಕು. ಅವರು ರಿರ್ಟನ್ಸ್ಸ್ ಫೈಲ್ ಮಾಡದೆ ಹೋದರೆ, ಅದರಲ್ಲಿ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದರಿಂದ ಲೋಕಾಯುಕ್ತರು ಇಂತಹವರು ರಿರ್ಟನ್ಸ್ಸ್ ಫೈಲ್ ಮಾಡಿಲ್ಲವೆಂದು ರಾಜ್ಯಪಾಲರಿಗೆ ಕಳುಹಿಸುತ್ತಾರೆ. ರಾಜ್ಯಪಾಲರು ಯಾರು ರಿರ್ಟನ್ಸ್ಸ್ಫೈಲ್ ಮಾಡಿಲ್ಲ ಅವರ ಒಂದು ಪಟ್ಟಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಾರೆ. ಇಷ್ಟು ಮಾಡಿದ ಮೇಲೂ ಅದರಲ್ಲಿ ಕಾನೂನು ಪ್ರಕಾರ ಕ್ರಮಕೈಗೊಳ್ಳಬೇಕಾಗಿರತಕ್ಕಂತಹದ್ದು ಯಾವುದು ಇಲ್ಲ.

ಶ್ರೀ ವೈ.ರಾಮಕೃಷ್ಣ : ಸೆಕ್ಷನ್ 20 ಏನು ಹೇಳುತ್ತದೆ, ಸರ್ಕಾರದ ಅಧಿಕಾರಿಗಳು ಜೂನ್ 30ರೊಳಗಾಗಿ ಅವರ ಆಸ್ತಿಯ ವಿವರಗಳ ಪಟ್ಟಿಯನ್ನು ಕೊಡಬೇಕು. ಕೊಡದಿದ್ದವರಿಗೆ ಏನು ಮಾಡಬೇಕೆಂಬ ಪ್ರಾವಿಷನ್ ಅದರಲ್ಲಿ ಇಲ್ಲ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ಹಲವಾರು ವರ್ಷಗಳ ಹಿಂದೆನೇ ಲೋಕಾಯುಕ್ತ ಬಂದಿದೆ ಆದರೆ ಲೋಕಾಯುಕ್ತಕ್ಕೆ ಯಾವುದೇ ಅಧಿಕಾರವಿಲ್ಲವೆಂದು ಹೇಳತಕ್ಕಂಥಹದ್ದು

ನಮ್ಮ ಗಮನಕ್ಕೆ ಬಂದಿದೆ. ಆದುದರಿಂದ ಇದರ ಬಗ್ಗೆ ನಿಮ್ಮ ಸಲಹೆಗಳನ್ನು ಕೂಡ ಕೇಳಿಕೊಂಡು ಹಾಗೂ ಜಂಟಿ ಸದನದ ಸಮಿತಿಯ ಸಲಹೆ ಕೂಡ ನಮ್ಮ ಮುಂದೆ ಇದೆ. ಇದನ್ನೆಲ್ಲ ವಿಚಾರ ಮಾಡಿ, ಎಲ್ಲರು ಒಟ್ಟಾಗಿ ಸೇರಿ ಸಮಗ್ರವಾಗಿರತಕ್ಕಂತಹ ತಿದ್ದುಪಡಿಯನ್ನು ಲೋಕಾಯುಕ್ತಕ್ಕೆ ತರಬೇಕೆಂದು ಹೇಳುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಆ ಮಾತನ್ನು ಹೇಳಿದ್ದಾರೆ. ಆದುದರಿಂದ ಇದರ ಬಗ್ಗೆ ಸರ್ಕಾರ, ನಿಮ್ಮ ಸಲಹೆಗಳನ್ನು ಸ್ವಾಗತ ಮಾಡುತ್ತದೆ. ಈ ತಿದ್ದುಪಡಿಗೆ ತಾವು ತಮ್ಮ ಅನುಮೋದನೆ ಕೊಡಿ. ಸಮಗ್ರವಾಗಿರತಕ್ಕಂತಹ ಈ ತಿದ್ದುಪಡಿಗೆ ನೀವು ಯಾವುದೇ ಸಲಹೆಯನ್ನು ಕೂಡ ಕೊಟ್ಟರು ಅದನ್ನು ಸ್ವಾಗತಿಸುತ್ತೇವೆ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ಮಾತನಾಡುವುದಿದ್ದರೆ ಮಾತನಾಡಲಿ, ಅದು ಸಭಾಧ್ಯಕ್ಷರ ವಿವೇಚನೆಗೆ ಬಿಟ್ಟದ್ದು.

ಶ್ರೀ ವೈ. ರಾಮಕೃಷ್ಣ : ಇದು ಬರೀ ಸಬ್‌ಸ್ಟಿಟ್ಯೂಟ್ ಮಾಡುವ ಪ್ರಶ್ನೆಯಲ್ಲ. ನಾನು ತಮಗೆ ಹೇಳಿದೆ, ತಾವು ಸೆಕ್ಷನ್ 20 ಮತ್ತು 22ನ್ನು ಸ್ವಲ್ಪ ತೆಗೆದು ನೋಡಿ. ಹಿಂದಿನ ಕಾಲದಲ್ಲಿ ತಾವು ಇದನ್ನು ಮಾಡಿದಿರಿ, ಅದಕ್ಕೋಸ್ಕರ ಇದು ಪರಿಣಾಮರಹಿತವಾಯಿತು, ಸಾರ್ವಜನಿಕರ ಟೀಕೆಗೆ ಒಳಗಾಗಿದೆ. ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಏನು ಮಾಡಬೇಕೆಂದು ಹೇಳಿ, ಸಮಗ್ರವಾದಂಥ ಮಸೂದೆಯನ್ನು ತರುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಮುಖ್ಯಮಂತ್ರಿಗಳು, ತಾವು ಇದರಲ್ಲಿ ಒಳಪಡುತ್ತೇವೆಂದು ಹೇಳಿದ್ದಾರೆ. ಅನೇಕ ಸಾರಿ ಈ ಸದನದ ಮುಂದೆ ಹೇಳಿದ್ದಾರೆ. ದಯವಿಟ್ಟು ಸಮಗ್ರವಾದ ಮಸೂದೆಯನ್ನು ತೆಗೆದುಕೊಂಡಿ ಬನ್ನಿ. ಏತಕ್ಕೆಂದರೆ ಒಂದೇ ಒಂದು ಪದವನ್ನು ಹಾಕಿ, ಸಮಗ್ರವಾಗಿ ನಾವು ಮಾತನಾಡಬೇಕೆಂದು ಹೇಳಿದರೆ ಸೂಕ್ತವೇ?

ಶ್ರೀ ಎಂ.ಸಿ.ನಾಣಯ್ಯ : ಅದರ ಬಗ್ಗೆ ಒಂದು ಜಂಟಿ ಸದನದ ಸಮಿತಿಗೆ ಒಪ್ಪಿಸಿ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ರಾಮಕೃಷ್ಣರವರೆ, ನೀವು ನಾಳೆ ಮಾತನಾಡಿ, ಚೆನ್ನಾಗಿ ಮಾತನಾಡುತ್ತೀರಿ. ನೀವು ಕಾನೂನು ಮತ್ತು ಸಂಸದೀಯ ಮಂತ್ರಿಗಳಾಗಿದ್ದವರು ಇದರ ಬಗ್ಗೆ ಬಹಳ ಗಹನವಾಗಿ ಅಭ್ಯಾಸ ಮಾಡಿದವರು. ನಾಳೆ ಮಾತನಾಡಿ, ಚೆನ್ನಾಗಿ ಮಾತನಾಡುತ್ತಾರೆ ಸ್ವಾಮಿ ಅವರು ಮಾತನಾಡುತ್ತಾರೆ ನಾವು ಮಾತನಾಡುತ್ತೇವೆ.

ಅಧ್ಯಕ್ಷರು : ಇನ್ನು ಎರಡು ತಿದ್ದುಪಡಿ ವಿಧೇಯಕಗಳಿವೆ, ಅದನ್ನು ಮುಗಿಸೋಣ. ನಾಳೆ ನೀರಾವರಿಗಾಗಿ ಇಡೀ ದಿವಸ ಮೀಸಲಾಗಿಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಬಹಳ ಮುಖ್ಯವಾದ ವಿಚಾರಗಳು ಸೇರಿಕೊಂಡಿವೆ.

ಅಧ್ಯಕ್ಷರು : ಈ ಮಹಿಳೆಯರ ವಿಧೇಯಕ ಪಾಸ್ ಆದ ಮೇಲೆ ನಿಮಗೆ ಇಲ್ಲಿರುವ ಮನಸ್ಸಿಲ್ಲ ಏತಕ್ಕೆ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಹಿಳೆಯರ ವಿಧೇಯಕ, ಪಂಚಾಯತ್ ವಿಧೇಯಕ ಎಲ್ಲವನ್ನು ಮಾಡಿಕೊಟ್ಟಿವಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಮಹಿಳೆಯರು ಮುಗಿಸಿಕೊಂಡಿದ್ದಾರೆ. ಆದುದರಿಂದ ನಾವು ಇಲ್ಲಿ ಇರುವುದಕ್ಕೆ ಸಾಧ್ಯವಿಲ್ಲ, ನಾವು ಮನೆಗೆ ಹೋಗಬೇಕು. ನಾವು ಮೊದಲೇ ಹೋಗಬೇಕೆಂದಿದ್ದೆವು, ಪ್ರಮೀಳಾರವರು ನಮ್ಮ ಮೇಲೆ ಜಗಳವಾಡಿದರು ನಾವೇನು ಮಾಡೋಣ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಸಭಾಧ್ಯಕ್ಷರೆ, ಮಾನ್ಯ ರಾಮಕೃಷ್ಣರವರು. ಮತ್ತು ಖರ್ಗೆಯವರು, ಸಮಗ್ರವಾಗಿರತಕ್ಕಂಥ ತಿದ್ದುಪಡಿಯನ್ನು ತರುವುದಕ್ಕೆ ಜಂಟಿ ಸದನದ ಸಮಿತಿಯನ್ನು ಮಾಡಬೇಕೆನ್ನುವುದು ತಮ್ಮ ಬಯಕೆಯಾದರೂ ಕೂಡ ಅದಕ್ಕೆ ನಾವು ಇವತ್ತೇ ಒಪ್ಪಿಗೆ ಕೊಡುತ್ತೇವೆ. ಇವತ್ತೇ ತಿದ್ದುಪಡಿ ಏತಕ್ಕೆ ಇಟ್ಟುಕೊಂಡಿದ್ದೇವೆಂದರೆ, ಕಾನೂನಿನಲ್ಲಿ ಇವತ್ತು .....

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ವಿಧೇಯಕವನ್ನು ಇವತ್ತೇ ಒಪ್ಪದೆ ಇರುವುದರಿಂದ ಏನಾದರು ಹಣಕಾಸಿನ ನಷ್ಟ, ಬಹಳ ತುರ್ತಿದೆ, ತೊಂದರೆಯಿದೆ ಎನ್ನುವುದೇನು ಇಲ್ಲ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ಸಭಾಧ್ಯಕ್ಷರೆ, 7.00 ಗಂಟೆಯಾಗಿದೆ, ನಾವೆಲ್ಲಾ ಹೋಗಬೇಕು ಸಮಯ ಮೀರಿದೆ, ಆದುದರಿಂದ ನಾಳೆಗೆ ಚರ್ಚೆ ಮಾಡುವುದು ಅದೊಂದು ಭಾಗ. ಆದರೆ ಇದರಲ್ಲಿ ಇನ್ನು ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಹೊರಟ್ಟಿದ್ದೀರಿ. ನಾನು ನೇರವಾಗಿ ಒಪ್ಪಿದ್ದೇನೆ, ಸಮಗ್ರವಾದ ಚರ್ಚೆ ಮಾಡಬೇಕಾಗುತ್ತದೆ, ತಿದ್ದುಪಡಿ ತರಬೇಕಾಗುತ್ತದೆ, ಜಂಟಿ ಸದನದ ಸಮಿತಿಗೆ ಸರ್ಕಾರ ಒಪ್ಪಿದೆ. ಇದಕ್ಕೆ ಒಪ್ಪಿಗೆ ಕೊಡಲು ಅಡ್ಡಿ ಏನು?

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ಅದೇನೋ ಇವತ್ತು ಅವರಿಗೆ ಸಮಯ ಸರಿಯಿಲ್ಲ ವೆಂದು ಕಾಣುತ್ತದೆ.

ಅಧ್ಯಕ್ಷರು : ಈಗ ಸ್ಕ್ಯಾಂಪ್ಸ್ ಮತ್ತು ಪ್ರೌಢಶಿಕ್ಷಣ ಮಂಡಳಿ ಬಗ್ಗೆ ಇದೆ. ಈ ಎರಡನ್ನು ಮುಗಿಸೋಣವೆ? ಅದರ ಬಗ್ಗೆ ಮಾತನಾಡುವವರು ಯಾರು? ನಾಳೆ

ನೀರಾವರಿಗೋಸ್ಕರ ಇಡೀ ದಿವಸ ಮೀಸಲಿಟ್ಟಿದ್ದೇವೆ. ಬಂಗಾರಪ್ಪನವರೆ, ಈ ಎರಡು ವಿಷಯಗಳು, ಎರೆಡೆರಡು ನಿಮಿಷದಲ್ಲಿ ಮುಗಿದು ಹೋಗುತ್ತದೆ.

ಶ್ರೀ ಆರ್.ಎಲ್.ಜಾಲಪ್ಪ (ಕಂದಾಯ ಸಚಿವರು) : ಅಧ್ಯಕ್ಷರೆ, ಈ ಬಿಲ್ಲಿನ ಸೆಕ್ಷನ್ 28 ಕ್ಕೆ ಈಗಾಗಲೇ ತಿದ್ದುಪಡಿಯಾಗಿದೆ. ಇದನ್ನು ಸುಮ್ಮನೆ ಮೊರಾಲಿಟಿಗೋಸ್ಕರ, ರಿಜಿಸ್ಟ್ರೇಷನ್ ಪುಸ್ತಕದಲ್ಲಿ ಸ್ಟ್ಯಾಂಪ್ ಡ್ಯೂಟಿ ಕೊಟ್ಟಿದ್ದಾರೆಂದೂ ಖಾತರಿಪಡಿಸಿಕೊಂಡು ನಮೂದು ಮಾಡಿ ಎನ್ನುವುದನ್ನು ಮಾತ್ರ ಇದರಲ್ಲಿ ತಂದಿದ್ದೇವೆ. see 28 has already approved by this Hourse.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಇದರಲ್ಲಿ ಎಷ್ಟು ದೋಷಗಳಿವೆ ಎಂದು ಬರಹದಲ್ಲಿ ಬರೆದುಕೊಟ್ಟಿದ್ದೇವೆ. ಬಹಳ ಸುಲಭವಾಗಿ ಬರೆದುಕೊಟ್ಟು ಬಿಡಿ ಎಂದು ಹೇಳುತ್ತಿದ್ದೀರಿ....

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಹಿರಿಯ ಸದಸ್ಯರಾದ ನೀವು ಈ ರೀತಿ ಮಾತನಾಡಬಾರದು.

ಶ್ರೀ ವೈ. ರಾಮಕೃಷ್ಣ : ನೀವು ಈಗ ವಿಧೇಯಕವನ್ನು ತಂದಿರತಕ್ಕ ವಿಧಾನ ಸರಿಯಲ್ಲ ನೀವು ಸ್ಟ್ಯಾಂಪ್ ಆಕ್ಟನ್ನು ತಿದ್ದುಪಡಿ ಮಾಡಿ, ತೆರಿಗೆಯನ್ನು ವಸೂಲ್ಮಾಡತಕ್ಕಂತಹದ್ದು, ಇದಕ್ಕಿಂತ ಕ್ರೂರವಾದದ್ದು ಈ ಜಗತ್ತಿನಲ್ಲಿ ಇನ್ನಾವುದೂ ಇಲ್ಲ.ಇದು ಕ್ರೂರ. ಇದನ್ನು ಯಾರಾದರೂ ಒಪ್ಪುತ್ತಾರೆಯೆ? ಯಾವುದಾದರು ರಾಜ್ಯದಲ್ಲಿ ಆಗಿದೆಯೇ ಎಂದು ಕೇಳಿದರೆ ಆಗಿದೆ ಎಂದರು. ಯಾವ ರಾಜ್ಯಗಳಲ್ಲಿ ಈ ರೀತಿಯಾಗಿದೆ ತಂದು ಕೊಡಿ. ಮೋಟಾರು ವಾಹನಗಳನ್ನು ಕೊಂಡುಕೊಳ್ಳುವುದಾಗಲಿ, ನಿರ್ವಹಣೆ ಮಾಡುವುದಾಗಲಿ, ವರ್ಗಾವಣೆ ಮಾಡುವುದಾಗಲಿ, ಹಾಗೂ ತೆರಿಗೆ ವಸೂಲ್ಮಾಡುವುದು ಮೋಟಾರು ವಾಹನಗಳ ಕಾಯ್ದೆಯಲ್ಲಿ ಬರುತ್ತದೆ. ಸಂವಿಧಾನದಲ್ಲಿ ಇದು ಕನ್‌ಕರೆನ್ಸ್ ಪಟ್ಟಿಯ. ಕೆಳಗೆ ಬರುತ್ತದೆ. ಸ್ವಾಮಿ, ಇವರ ಒಂದು ಗುಟ್ಟು ಹೇಳುತ್ತೇನೆ, ಪ್ರವೇಶ ತೆರಿಗೆಯಲ್ಲಿ ಇವರು ಗೆದ್ದುಬಿಟ್ಟರು, ಪ್ರವೇಶ ತೆರಿಗೆಗೆ ರಾಷ್ಟ್ರಪತಿಗಳ ಒಪ್ಪಿಗೆಯನ್ನು ಪಡೆದುಕೊಂಡರು. ನಮ್ಮ ಇಲಾಖೆಯವರು ಏನು ತಿಳಿದುಕೊಂಡರು, ಯಾವ ತಿದ್ದುಪಡಿಯನ್ನು ಬೇಕಾದರೂ ಸ್ಟ್ಯಾಂಪ್ ಆಕ್ಟ್‌ನಲ್ಲಿ ತಂದು ತಹಸಿಲ್ದಾರರ ಹತ್ತಿರ ಒಂದು ಠಸ್ಸೆ ಒತ್ತಿಸಿಬಿಟ್ಟು ಎಷ್ಟು ಹಣ ಬಂದಿದೆ ಎಂದು ವಸೂಲ್ಮಾಡುವುದು. Is it right ? Is it ethical? Is it constitutional? ಅದನ್ನು ನಾವು ಸ್ವಲ್ಪ ಆಲೋಚನೆ ಮಾಡಬೇಕು. ಇದರಲ್ಲಿ ಸಂವಿಧಾನಾತ್ಮಕ ವಿಚಾರವಿದೆ.

(ಗೊಂದಲ)

Sri. R.L. Jalappa : This Hon'ble House has already accepted this amendment. This is only a consequential

amendment. The principal amendment you have alredy adopted.

Sri. Y. Ramakrishna : The method adopted is unconstitutional, illegal and invalid. I challenge that it cannot be under this Act. It should be done only under the Motor Vehicles Act.

Sri R.L. Jalappa : When Section 28 was passed, what was the Hon'ble Member doing?

(ಗೊಂದಲ)

ಅಧ್ಯಕ್ಷರು : ಬೇರೆ ಎಲ್ಲಾದರೂ ಮಾಡಿದ್ದರೆ ಹೇಳಿ ಎಂದು ನೀವು ಸಲಹೆ ಮಾಡಿದಿರಿ.

ಶ್ರೀ.ವೈ.ರಾಮಕೃಷ್ಣ : ಅಧ್ಯಕ್ಷರೆ, ತಾವು ನಮಗೆ ಈ ವಿಚಾರದಲ್ಲಿ ರಕ್ಷಣೆ ಕೊಡಬೇಕು. ಮೋಟಾರು ವಾಹನಗಳ ಮಸೂದೆ ಕನ್‌ಕರೆನ್ಸ್ ಪಟ್ಟಿ ಕೆಳಗೆ ಬರುತ್ತದೆ. ನಾನು ಒಪ್ಪುತ್ತೇನೆ, ನೀವು ಯಾವ ಕಾಯಿದೆಗೆ ತಿದ್ದುಪಡಿ ತರಬೇಕು ತಿದ್ದುಪಡಿಯಾದದ್ದನ್ನು ರಾಜ್ಯಪಾಲರಿಂದ ರಾಷ್ಟ್ರಪತಿಗಳಿಗೆ ತಾನೆ ನೀವು ಕಳುಹಿಸಬೇಕು? ನೀವು ಪ್ರವೇಶ ತೆರಿಗೆಗೆ ರಾಷ್ಟ್ರಪತಿಗಳ ಒಪ್ಪಿಗೆ ದೊರೆಯಿತೆಂದು ಅದಕ್ಕೋಸ್ಕರ ಇದಕ್ಕೂ ಕೊಡಬೇಕು ಎನ್ನತಕ್ಕಂತಹದ್ದು ನ್ಯಾಯಸಮ್ಮತವಲ್ಲ.

ಅಧ್ಯಕ್ಷರು : ಸನ್ಮಾನ್ಯ ರಾಮಕೃಷ್ಣರವರೆ, ತಾವು ಮಾತನಾಡತಕ್ಕಂತಹ ಸಂದರ್ಭದಲ್ಲಿ ಬೇರೆ ಯಾವುದಾದರೂ ರಾಜ್ಯದಲ್ಲಿ ಮಾಡಿರುವ ನಿದರ್ಶನವಿದ್ದರೆ ನನ್ನ ಗಮನಕ್ಕೆ ತೆಗೆದುಕೊಂಡು ಬನ್ನಿ, ಈಗಲೇ ನಾವು ಮಾಡುತ್ತೇವೆಂದು ಹೇಳಿದಿರಿ. ಅವರು ಸಿದ್ದರಾಗಿ ಮಾಡಿದ್ದಾರೆಂದು ನಿದರ್ಶನವನ್ನು ಕಳುಹಿಸಿದ್ದಾರೆ, ಅಲ್ಲಿದೆ ನೋಡಿ.

(ಗೊಂದಲ)

ಶ್ರೀ. ವೈ.ರಾಮಕೃಷ್ಣ : ಇದು ಕಾನ್‌ಸ್ಟಿಟ್ಯೂಷನಲ್ ಇಷ್ಯು ಆಗುತ್ತದೆ, ಲೀಗಲ್ ಇಷ್ಯು ಆಗುತ್ತದೆ. ಇದರ ಮೇಲೆ ವ್ಯಾಖ್ಯಾನ ಮಾಡಬೇಕಾಗುತ್ತದೆ. ಎರಡನೆಯದಾಗಿ, ಮೋಟಾರು ವಾಹನಗಳನ್ನು ಇಟ್ಟುಕೊಳ್ಳತಕ್ಕಂತಹವರ ಮೇಲೆ ಒಂದು ರೀತಿ ಈ ಪದಗಳನ್ನು ಅಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ. ತಾವು ತಂದಿದ್ದೀರಿ. ಲೈಫ್ ಟ್ಯಾಕ್ಸ್ ಕೊಡುಬೇಕು, ವರ್ಗಾವಣೆ ಶೇಕಡ ಎರಡರಷ್ಟು ಕೊಡಬೇಕು, ಎಲ್ಲಿಂದ ದುಡ್ಡು ತೆಗೆದುಕೊಂಡು ಕೊಡುವುದು? ಟೈರ್ ಬೆಲೆ ಜಾಸ್ತಿಯಾಗಿದೆ, ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ, ಈ ಪದಗಳನ್ನು ಅಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ. ಅವರ ಮೇಲೆ ನಿಮ್ಮ ಕ್ರೂರ ದೃಷ್ಟಿ ಬಿದ್ದಿದೆಯೇನು? ಇವೆಲ್ಲವನ್ನೂ ನೀವು ಅರ್ಥ ಮಾಡಿಕೊಂಡು ಈ ಬಿಲ್ಲನ್ನು ತರಬೇಕಾಗಿದೆಯೇ ಹೊರತು .....

ಶ್ರೀ ಆರ್.ಜಾಲಪ್ಪ : ಅವರು ಮಾತನಾಡುವುದನ್ನು ನೋಡಿದರೆ ಎಲ್ಲವನ್ನು ಇವರೇ ಕೊಟ್ಟಂತೆ ಮಾತನಾಡುತ್ತಾರೆ.

(ಗೊಂದಲ)

7.10 ಪಿ.ಎಂ

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾವು ಹೋಗುತ್ತೇವೆ.

ಅಧ್ಯಕ್ಷರು: ನೀವು ಕುಳಿತುಕೊಳ್ಳಿ, ನಮ್ಮನ್ನು ಬಿಟ್ಟು ನೀವು ಹೋಗುವಂತಿಲ್ಲ. ಮಾನ್ಯ ರಾಮಕೃಷ್ಣರವರೇ, ತಾವು ಈ ಸದನದ ಬಹಳ ಹಿರಿಯ ಸದಸ್ಯರು You are a very senior Member of the House. You have had the honour of being the Hon'ble Minister of Law & Parliamentary Affairs. Levying tax accepting it, not accepting it, they are all matters for debate on the floor of the House. But to infor or to interpret an attempt by a Government to levy tax as criminal Act, would not be in good taste. I appeal to you to kindly take back those words. Let not those words find place in the records.

ಶ್ರೀ. ವೈ.ರಾಮಕೃಷ್ಣ : ಯಾವುದು ಸ್ವಾಮಿ?

Mr.Speaker: Treating the whole class of tax payers as criminals. ಎಂಬ ಅರ್ಥ ಬರುವ ರೀತಿಯಲ್ಲಿ ತಾವು ಮಾತನಾಡಿದಿರಿ. It is not in good taste. It is my appeal to you.

ಶ್ರೀ. ವೈ.ರಾಮಕೃಷ್ಣ ಸ್ವಾಮಿ : ನಾನು ಹೇಳತಕ್ಕದ್ದು, ಹಿಂದಿನ ಸರ್ಕಾರ 5 ವರ್ಷಗಳಲ್ಲಿ ಹಾಕಿದ್ದ ಟ್ಯಾಕ್ಸನ್ನು ಇವರು ಒಂದೇ ವರ್ಷದಲ್ಲಿ ಹಾಕಿದ್ದಾರೆ. ಈ ಭಾರವನ್ನು ಜನತೆ ಹೇಗೆ ತಡೆಯಬೇಕು?

ಅಧ್ಯಕ್ಷರು: ದಯವಿಟ್ಟು ಕೇಳಿ. My observation is as simple as this. Levying tax is not an act of criminality.

Sri. M.P.Prakash: Can on of taxation is very clear on it.

Mr. Speaker: I think the atmosphere is not conductive. it is quite restless. ಮಾನ್ಯ ವಾಟಾಳ್ ನಾಗರಾಜ್‌ರವರ ಸಲಹೆಯನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಅವರು ಬಹಳ ಎಮೋಷನಲ್ ಆಗಿ ಮಾತನಾಡಿದ್ದಾರೆ. ಅದನ್ನು ಕಡತದಿಂದ ತೆಗೆಯಬೇಕು.

ಅಧ್ಯಕ್ಷರು: ಪರವಾಗಿಲ್ಲ, ಆದರೆ ಮಾನ್ಯ ನಾಣಯ್ಯನವರು ಎದ್ದುನಿಂತು ಯಾವುದಾದರೂ ವಿಚಾರವನ್ನು ಮಂಡನೆ ಪ್ರಾರಂಭ ಮಾಡಿದ ತಕ್ಷಣವೇ ಇಲ್ಲ...

Sri M.C.Nanaiah: We are on the wrong side of 7.00 P.M. now.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರ ಸಲಹೆಯನ್ನು ನಾನು ಅನುಮೋದನೆ ಮಾಡಿದ್ದೇನೆ. ಈಗ ಸಭೆಯನ್ನು....

ಶ್ರೀ ವಾಟಾಳ್ ನಾಗರಾಜ್: ನಾಣಯ್ಯನವರ ಬಗ್ಗೆ ಏನು ಅಭಿಪ್ರಾಯವನ್ನು ಇಟ್ಟುಕೊಂಡಿದ್ದೀರಿ ಅದೇ ರೀತಿ ನಾನೂ ಕೂಡ ಒಂದು ಒಳ್ಳೆಯ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ. ಅವರು ನನಗೆ ಬಹಳ ಒಳ್ಳೆಯ ಸ್ನೇಹಿತರು. ಆದರೆ ಅವರ ನಕ್ಷತ್ರ ಯಾವುದೋ ಗೊತ್ತಿಲ್ಲ. ಅವರು ಬಂದರು ಎಂದರೆ ಯುದ್ಧ ಪ್ರಾರಂಭವಾಗುತ್ತದೆ. 7 ಗಂಟೆ ಮೇಲೆ ಕೂತುಕೊಳ್ಳಿ ಎಂದರೆ ನಮ್ಮ ಜಾಲಪ್ಪನವರಿಗೆ ಅಷ್ಟು ತಾಳ್ಮೆ ಇಲ್ಲ. ಬೇಗ ಬೇಗ ಹೋಗಬೇಕು ಎಂದು ಇರುತ್ತಾರೆ. ಅದು ಸರಿಯಲ್ಲ.

ಅಧ್ಯಕ್ಷರು: ಇಲ್ಲಿಗೆ ಸಭೆಯನ್ನು ಮುಕ್ತಾಯ ಮಾಡಿ ಬೆಳಿಗ್ಗೆ 11 ಗಂಟೆಯವರೆಗೂ ಮುಂದೂಡಿದ್ದೇನೆ.

(ಸದನವು ರಾತ್ರಿ 7.04 ಗಂಟೆಗೆ ಮುಕ್ತಾಯವಾಗಿ ಮತ್ತೆ ನಾಳೆ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(* ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)